ಸಂಸ್ಥೆಯಾಗಿದೆ. ಅದು ಎರಡೂ ಕಡೆಯಿಂದ ಸಹಾಯ ಪಡೆದು ಆಳ ಸಮುದ್ರದ ಮತ್ತು ತೀರ ಸಮುದ್ರದ ಮೀನುಗಾರಿಕೆಯನ್ನು ನಡೆಸಬೇಕೆಂಬ ಪ್ರಯತ್ನ ಮಾಡಿದೆ. ಆ ದಿಸೆಯಲ್ಲಿ ಅದು ಕೆಲಸ ಕೆಲಸ ಮಾಡುತ್ತಿದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಇನ್ನು ಒಳನಾಡು ಮೀನುಗಾರಿಕೆ ನವಂಗೆ ಬೇಕಾಗಿರುವುದು ಎಂಭತ್ತು ಕೋಟಿ ಮೀನು ಮರಿ ಬೇಕಾಗಿದೆ. ಆದರೆ ನಮ್ಮಲ್ಲಿ ಕೇವಲ ೧೫–೧೬ ಕೋಟಿ ಮೀನುಮರಿಯನ್ನು ಉತ್ಪಾದನೆ ಮಾಡತಕ್ಕಂಥ ಸಾಮರ್ಥ್ಯವನ್ನು ನಾವು ಹೊಂದಿದ್ದೇವೆ. ಇದರಲ್ಲಿ ನಾನಾ ಕಾರಣಗಳಿವೆ. ಕೆಲವು ಉತ್ಪಾದನೆಗೆ ವರ್ಷಗಳು ಹೆಚ್ಚಾಗುತ್ತವೆ, ಕೆಲವು ವರ್ಷಗಳು ಕಡಿಮೆಯಾಗುತ್ತವೆ. ಆದರೂ ಸಹ ಈಗಾಗಲೇ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡು ಒಳನಾಡು ಮೀನುಗಾರಿಕೆಗೆ ಈ ಅಭಿವೃದ್ಧಿ ನಿಗಮವು ಮೀನುಮರಿಯ ಉತ್ಪಾದನೆಯನ್ನು ಮಾಡುವ ಜವಾಬ್ದಾರಿಯನ್ನು ವಹಿಸಿ ಸೂಕ್ತ ಕಾರ್ಯಕ್ರಮವನ್ನು ಹಾಕಿದ್ದೇವೆ. ಕೆಲವು ದಿನಗಳ ಹಿಂದೆ ಇದಕ್ಕಾಗಿ ಸರ್ಕಾರಿ ಆಜ್ಞೆಯನ್ನು ಕೂಡ ಹೊರಡಿಸಿದ್ದೇವೆ. ಮತ್ತೆ ಮೀನುಗಾರರಿಗೆ ಬೇಕಾಗಿರತಕ್ಕಂಥ ಸವಲತ್ತುಗಳನ್ನು ಕೊಡುತ್ತಿದ್ದೇವೆ. ಅದರಲ್ಲಿ ಅವರಿಗೆ ಇನ್‌ಷ್ಯೂರೆನ್ಸ್ ಕೊಡುತ್ತಿದ್ದೇವೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸೇರಿ, ಪ್ರತಿಯೊಬ್ಬ ಮೀನುಗಾರರೂ ೧೫ ಸಾವಿರ ರೂಪಾಯಿಗಳ ಇನ್‌ಷ್ಯೂರೆನ್ಸ್‌ನ್ನು ಕೊಡತಕ್ಕಂಥ ಏರ್ಪಾಡನ್ನು ಕೂಡ ಮಾಡುತ್ತಿದ್ದೇವೆ.

ಇನ್ನು ಖಾಸಗಿ ಕೊಳಗಳ ಬಗ್ಗೆ ಕೇಳಿದ್ದೀರಿ. ಮೀನುಗಾರಿಕೆಗೋಸ್ಕರ ಕೊಳಗಳನ್ನು ನಿರ್ಮಿಸಲಿಕ್ಕೆ ಯಾರಾದರೂ ಮುಂದೆ ಬಂದು ನಲವತ್ತು ಸಾವಿರ ರೂಪಾಯ ಕೊಳವನ್ನು ಕಟ್ಟಿದರೆ ಅವರಿಗೆ ನಾವು ರಿಯಾಯಿತಿಯಾಗಿ ಹತ್ತು ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಡತಕ್ಕಂಥ ಕಾರ್ಯಕ್ರಮ ಇದೆ. ಇದರ ಬಗ್ಗೆ ಸಧ್ಯಕ್ಕೆ ನನ್ನ ಹತ್ತಿರ ಲೆಕ್ಕ ಇಲ್ಲ. ಮಾನ್ಯ ಸದಸ್ಯರಿಗೆ ಇದನ್ನು ಒದಗಿಸತಕ್ಕಂಥ ಏರ್ಪಾಡನ್ನು ನಾವು ಮಾಡುತ್ತೇವೆ.

ಪ್ರವಾಸಿ ಕೇಂದ್ರವಾಗಿ ಜೋಗ್ ಜಲಪಾತ

(೪೮೬) ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ವಾರ್ತಾ ಪ್ರವಾಸೋದ್ಯಮ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜೋಗ್ ಜಲಪಾತವು ಪ್ರಪಂಚದಲ್ಲೇ ಅತಿ ಸುಂದರವಾದ ಹಾಗೂ ಎತ್ತರವಾದ ಜಲಪಾತವೆಂದು ಪ್ರಸಿದ್ಧಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ?

ಆ) ಜೋಗ್ ಜಲಪಾತವನ್ನು ಜಗತ್ ಪ್ರಸಿದ್ಧಿಯಾದ ಪ್ರವಾಸಿ ಕೇಂದ್ರವೆಂದು ಅಭಿವೃದ್ಧಿ ಪಡಿಸಲಾಗುವುದೇ ?

ಇ) ಲಿಂಗನಮಕ್ಕಿ ಜಲಾಶಯದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಶೇಕಡಾ ನೂರರಷ್ಟು ನೀರನ್ನು ತಡೆಹಿಡಿದುದರಿಂದ ಜೋಗ್ ಜಲಪಾತವು ಕಣ್ಮರೆಯಾಗುತ್ತಿರುವ ವಿಷಯ ನಿಜವೇ ?

ಈ) ಹಾಗಿದ್ದಲ್ಲಿ ಜೋಗ್ ಜಲಪಾತಕ್ಕೆ ನೀರನ್ನು ಪುನರ್ ಶೇಖರಿಸುವುದಕ್ಕೆ ಹಾಗೂ ಅದನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಪ್ರವಾಸೋದ್ಯಮ ಇಲಾಖೆಯು ಯಾವ ಕ್ರಮವನ್ನು ಕೈಗೊಂಡಿರುವುದು ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಯುವಜನ ಸೇವಾ ಮತ್ತು ಕನ್ನಡ ಮಂತ್ರಿ, ಸಂಸ್ಕೃತಿ ಮತ್ತು ಕ್ರೀಡಾ ರಾಜ್ಯ ಸಚಿವರು).—

ಅ) ಹೌದು

ಆ) ವಿದೇಶಿ ಹಾಗೂ ದೇಶಿಯ ಪ್ರವಾಸಿಗರನ್ನು ಆಕರ್ಷಿಸಲು ಬೇಕಾಗುವಂತಹ ಮೂಲ ಸೌಲಭ್ಯಗಳನ್ನು ಒದಗಿಸುವ ದಿಸೆಯಲ್ಲಿ ಕರ್ನಾಟಕ ಪ್ರವಾಸೋದ್ಯಮವು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತದೆ.

ಇ) ಜಲಪಾತದಲ್ಲಿ ಧುಮುಕುವ ನೀರಿನ ಮಾತ್ರ ಗಣನೀಯವಾಗಿ ಕಡಿಮೆಯಾಗಿದೆ.

ಈ) ಕರ್ನಾಟಕ ವಿದ್ಯುಚ್ಛಕ್ತಿ ನಿಗಮವು ಜೋಗ್ ಜಲಪಾತಕ್ಕೆ ಜಲಾಶಯದ ನೀರಿನ ಪಂಟ್ಟವನ್ನು ಅನುಸರಿಸಿ ನೀರನ್ನು ಬಿಡುಗಡೆ ಮಾಡುತ್ತದೆ. ಜಲಾಶಯದಿಂದ ನೀರನ್ನು ಜಲಪಾತಕ್ಕೆ ಬಿಡುಗಡೆ ಮಾಡುವ ಅಧಿಕಾರವನ್ನು ಪ್ರವಾಸೋದ್ಯಮ ಇಲಾಖೆಯು ಹೊಂದಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಪ್ರವಾಸೋದ್ಯಮ ಇಲಾಖೆಗೆ ಜಲಾಶಯದಿಂದ ಜಲಪಾತಕ್ಕೆ ನೀರು ಬಿಡುವ ಅಧಿಕಾರ ಇಲ್ಲ ಎಂದು ನನಗೆ ಗೊತ್ತಿದೆ. ಈ ಜೋಗದ ಜಲಪಾತ ಈಗ ಬರೀ ಒಂದು ವಸ್ತು ಸಂಗ್ರಹಾಲಯದ ವೈಶಿಷ್ಟ್ಯವಾಗಿ ಉಳಿಯುವಂಥ ಪರಿಸ್ಥಿತಿ ಬಂದಿದೆ. ಅಲ್ಲಿ ನೀರು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ಅಲ್ಲಿ ಜಲಪಾತದಲ್ಲಿ ನೀರು ಇಲ್ಲವೇ ಇಲ್ಲ. ಚೆಲುವ ಕನ್ನಡ ನಾಡು ಎಂದು ಪುಸ್ತಕವನ್ನು ಬಹಳ ಸುಂದರವಾಗಿ ಸಿಂಗಾಪುರ್‌ನಲ್ಲಿ ಪ್ರಿಂಟ್ ಮಾಡಿಸಿದ್ದೀರಿ. ಅದು ಅಲ್ಲಿ ಇಲ್ಲವೇ ಇಲ್ಲ. ಮೊನ್ನೆಯ ದಿವಸ ನಾನು ಸಾಗರಕ್ಕೆ ಹೋಗಿದ್ದೆ. ಅಲ್ಲಿ ರಸ್ತೆಗಳಲ್ಲೆಲ್ಲಾ ಬೋರ್ಡ್‌ಗಳನ್ನು ಬರೆದಿದ್ದಾರೆ. ಜಗತ್ ಪ್ರಸಿದ್ಧವಾದ ಜಲಪಾತವನ್ನು ಸಂದರ್ಶಿಸಿರಿ ಎಂದು ಬೋರ್ಡ್ ಇದೆ. ಆಲ್ಲಿ ಜಲಪಾತವೇ ಇಲ್ಲ. ತಾವು ಪ್ರವಾಸೋದ್ಯಮ ಮಂತ್ರಿಯಾಗಿ ಸಂಬಂಧಪಟ್ಟ ಇಲಾಖೆಯ ಜೊತೆಯಲ್ಲಿ ಇದರ ಬಗ್ಗೆ ವ್ಯವಹಾರ ಏನಾದರೂ ಮಾಡಿದ್ದೀರಾ, ಮಾತನಾಡಿದ್ದೀರಾ? ಚರ್ಚೆ ಮಾಡಿದ್ದೀರಾ? ಜೋಗ್ ಜಲಪಾತದ ಸೌಂದರ್ಯವನ್ನು ಉಳಿಸುವ ಬಗ್ಗೆ ಏನಾದರೂ ಪ್ರಯತ್ನವನ್ನು ತಾವು ಮಾಡುತ್ತೀರಾ?

ಶ್ರೀ ಜೀವರಾಜ ಆಳ್ವ.—ಅಧ್ಯಕ್ಷರೇ, ಜೋಗದ ಜಲಪಾತದಲ್ಲಿ ನೀರಿನ ಗಾತ್ರ ಕಡಿಮೆಯಾಗಿದೆ ಎಂದು ಗೊತ್ತಿತ್ತು. ಆದರೆ ಅದು ಪೂರ್ಣವಾಗಿ ಮಾಯವಾಗಿದೆ ಎಂದು ಗೊತ್ತಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಮಾತನಾಡುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಗೊತ್ತಿಲ್ಲ ಎಂದರೆ ಪ್ರವಾಸೋದ್ಯಮ ಇಲಾಖೆ ನಿದ್ದೆ ಮಾಡುತ್ತಿತ್ತೆ. ಒಂದೊಂದು ಸಾರಿ ಮಳೆಗಾಲದಲ್ಲಿ ಆಡ್ವರ್‌ಟೈಸ್ ಮಾಡಿದಾಗ ನೀರು ಇರುವುದಿಲ್ಲ. ತಾವು ಪ್ರವಾಸೋದ್ಯಮ ಮಂತ್ರಿಯಾದ ಮೇಲೆ ಅಲ್ಲಿಗೆ ಸಂದರ್ಶನ ಮಾಡಬೇಕಾಗಿತ್ತು ಮತ್ತು ಅದರ ಸಮಸ್ಯೆಗೆ ಸಂಬಂಧಪಟ್ಟ ಇಲಾಖೆಯ ಜೊತೆಯಲ್ಲಿ ಚರ್ಚೆ ಮಾಡಬೇಕಾಗಿತ್ತು. ಈ ಸಮಯದಲ್ಲಿ ಒಂದು ವಿಷಯವನ್ನು ಸ್ಪಷ್ಟ ಪಡಿಸಲಿಕ್ಕೆ ಬಯಸುತ್ತೇನೆ. ನಾನು ಈ ಪವರ್ ಕಾರ್ಪೊರೇಷನ್ ಉಪಾಧ್ಯಕ್ಷನಾಗಿ ಈ ಇಲಾಖೆಯನ್ನು ನಿರ್ವಹಿಸುತ್ತಿದ್ದ ಕಾಲದಲ್ಲಿ ಅದಕ್ಕೋಸ್ಕರವಾಗಿ ಲಿಂಗನಮಕ್ಕಿ ಡ್ಯಾಮ್‌ನಿಂದ ಜಲಪಾತದ ಮಧ್ಯ ಭಾಗದಲ್ಲಿ ಸಣ್ಣ ಪುಟ್ಟ ಡ್ಯಾಮನ್ನು ಮಾಡಿ ಕ್ಯಾಚ್‌ಮೆಂಟ್ ನೀರನ್ನು ಒಟ್ಟು ಮಾಡಿ ಈ ಜೋಗದ ಜಲಪಾತವು ಒಟ್ಟಿಗೆ ದಿವಸಗಳೂ ಜೀವಂತವಾಗಿ ಇಡುವುದಕ್ಕೆ ಯೋಜನೆಯನ್ನು ವ್ಯವಸ್ಥೆ ಮಾಡಿದ್ದೆ. ಮಾನ್ಯ ಮೊಯಿಲಿಯವರು ಅರ್ಥ ಸಚಿವರಾಗಿದ್ದಾಗ ಅವರ ಗಮನಕ್ಕೆ ಇದನ್ನು ತಂದು ಅಲ್ಲಿಗೆ ಭೇಟಿ ಕೊಟ್ಟು ಅವರು ಇದನ್ನು ಮಾಡಿಸಬೇಕು ಎಂದೂ ಅವರು ಕೂಡ ಅಭಿಪ್ರಾಯಪಟ್ಟರು. ಅವರ ಅಧಿಕಾರ ಹೋಯಿತು. ಈಗ ತಾವು ಬಂದಿದ್ದೀರಿ. ನಿಮಗೆ ಹೇಳುತ್ತಿದ್ದೇನೆ. ಪವರ್ ಕಾರ್ಪೊರೇಷನ್ ನವರ ಜೊತೆಯಲ್ಲಿ ಕುಳಿತು ಈ ಯೋಜನೆಯನ್ನು ಕಾರ್ಯಗತ ಮಾಡಿಸುವುದಕ್ಕೆ ತಾವು ಪ್ರಯತ್ನ ಮಾಡಿದ್ದೀರಾ? ನಿಮ್ಮ ಕಾರ್ಪೊರೇಷನ್‌ನಲ್ಲೂ ಕೂಡ ಇದಕ್ಕೆ ಹಣವನ್ನು ಒಟ್ಟಿ ಮಾಡಿ ಸಮಭಾಗಿತ್ವ ಹಾಕುವುದಕ್ಕೆ ಸಾಧ್ಯವಿದೆಯೇ? ಇದು ಏನೂ ದೊಡ್ಡ ಪ್ರಮಾಣದ ಯೋಜನೆ ಆಗುವುದಿಲ್ಲ. ಲಿಂಗನಮಕ್ಕಿ ಜಲಾಶಯವನ್ನು ಡಿಸೈನ್ ಮಾಡಿದಾಗಲೇ ಈ ಜೋಗ್ ಜಲಪಾತಕ್ಕೆ ಇಷ್ಟು ನೀರನ್ನು ಬಿಡಬೇಕು ಎಂದು ಈ ಡಿಸೈನ್‌ನಲ್ಲಿ ಅವಕಾಶ ಇಟ್ಟು ಕೊಂಡಿದ್ದರು. ಈ ರೀತಿ ನೀರನ್ನು ಇಪ್ಪತ್ತಿನವರೆಗೂ ಕೂಡ ಕೊಡುತ್ತಿಲ್ಲ. ಜೋಗ ಜಲಪಾತದ ಅಸ್ತಿತ್ವದ ಮೂಲಭೂತ ಹಕ್ಕನ್ನು ಮೊಟಕು ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ. ನಮಗೂ ಅಧಿಕಾರ ಇಲ್ಲ. ಆದ್ದರಿಂದ ಇದರ ಸೌಂದರ್ಯವನ್ನು ಜೀವಂತಗೊಳಿಸುವುದಕ್ಕೆ ಈ ದಿವಸದಿಂದಲೇ ಕಾರ್ಪೊರೇಷನ್ ಜೊತೆಗೆ ಮತ್ತು ಆ ಇಲಾಖೆಯ ಜೊತೆಗೆ ವ್ಯವಹಾರ ಮಾಡುವುದಕ್ಕೆ ನಿಮ್ಮ ಇಲಾಖೆಯ ಪತಿಯಿಂದ ಮತ್ತು ನಿಗಮದ ವತಿಯಿಂದ ತಾವು ಸಿದ್ಧರಿದ್ದೀರಾ?

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಸದಸ್ಯ ಶ್ರೀನಿವಾಸ್ ಅವರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಜಲಪಾತದ ನೀರು ಸ್ವಲ್ಪ ಇದೆ. ಪವರ್ ಕಾರ್ಪೊರೇಷನ್ ಹತ್ತಿರ ಪಂತ್ತು ನಮ್ಮ ಇಲಾಖೆಯ ವತಿಯಿಂದ ಇದಕ್ಕೆ ಹಣ ಕೊಡಿಸಲಿಕ್ಕೆ ಪ್ರಯತ್ನ ಮಾಡಿ ಈ ಜಲಪಾತಕ್ಕೆ ಪುನಃ ಶ್ವೇತನ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಅಲ್ಲಿ ಒಂದು ಮಟ್ಟದ ನೀರು ಹರಿದಾಗ ಜಲಪಾತವಾಗಿ ಕಾಣಿಸಿ ಕೊಳ್ಳುತ್ತದೆ. ಅಷ್ಟು ನೀರು ಅಲ್ಲಿ ಹರಿಯದಿದ್ದಾಗ ಅದು ಜಲಪಾತವಾಗಿ ಕಾಣುವುದಿಲ್ಲ. ತಾವು ಒಂದು ಸಾರಿ ಹೋಗಿ ನೋಡಿ. ಸಿಂಗಾಪುರ್ ಹಾಲಿಡೇ ಬಿಟ್ಟು ಜೋಗ್‌ಫಾಲ್ಸ್‌ನ್ನು ಹೋಗಿ ನೋಡಿದರೆ ತಮಗೆ ಅದರ ಆರ್ಥವಾಗುತ್ತದೆ.

ಶ್ರೀ ಜೀವರಾಜ ಆಳ್ವ.—ಸದಸ್ಯರ ಸಲಹೆಯನ್ನು ಒಪ್ಪುತ್ತೇನೆ. ಪವರ್ ಕಾರ್ಪೊರೇಷನ್ ಹತ್ತಿರ ಮಾತನಾಡಿ ಅದಕ್ಕೆ ಏನು ವ್ಯವಸ್ಥೆ ಇದೆಯೋ ಅದನ್ನು ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸಚಿವರ ಉತ್ತರವನ್ನು ನಾನು ಕೇಳಿದ್ದೇನೆ. ಈಗಲೂ ಕೂಡ ನೀರು ಹರಿಯುತ್ತಿದೆ ಎಂದು ಅವರು ಹೇಳಿದ್ದಾರೆ. ಅದು ಸತ್ಯಕ್ಕೆ ದೂರವಾದ ವಿಚಾರ.

ಶ್ರೀ ಜೀವರಾಜ ಆಳ್ವ.—ಈಗ ವೆರದಿ ಬಂತು.

ಶ್ರೀ ಎಂ. ವೀರಪ್ಪ ಮೊಯಿಲಿ.—ವರದಿ ಬಂದಿದೆ. ಆದರೆ ಜಲಪಾತದಲ್ಲಿ ನೀರು ಹರಿಯು ಬೇಕಲ್ಲವೇ? ಅಣೆಕಟ್ಟನ್ನು ಕಟ್ಟಬೇಕು ಎಂದು ಹೇಳಿ ಕಾರ್ಪೊರೇಷನ್ ಯೋಜನೆಯನ್ನು ಮಾಡಿದ್ದಾಗಲೇ ಮಾಡಿದ್ದರು. ಆ ಬಗ್ಗೆ ಸರ್ಕಾರ ಅಣೆಕಟ್ಟನ್ನು ಕಟ್ಟಲಿಕ್ಕೆ ನೀವು ಕೇಂದ್ರ ಸರ್ಕಾರದಿಂದ ಸಹಾಯವನ್ನು ತೆಗೆದುಕೊಳ್ಳಬೇಕು. ಇದು ಟೂರಿಸಂಗೆ ಸಂಬಂಧ ಪಟ್ಟಿದ್ದರಿಂದ ಈ ಬಗ್ಗೆ ಏನಾದರೂ ಮಾಡಬೇಕೆಂಬ ಯೋಜನೆ ಇದೆಯೇ? ಎರಡನೆಯದಾಗಿ ಆ ಅಣೆಕಟ್ಟು ಆಗುವವರೆಗೂ ನಿರ್ದಿಷ್ಟ ತಿಂಗಳು, ನಿರ್ದಿಷ್ಟ ದಿವಸದಲ್ಲಿ ಆ ಜಲಪಾತದಲ್ಲಿ ನೀರು ಬಿಡತಕ್ಕಂಥ ಒಂದು ಪ್ರತ್ಯೇಕ ವ್ಯವಸ್ಥೆಯನ್ನು ಏನಾದರೂ ಮಾಡಿದ್ದೀರಾ? ಅವರು ಹಿಂದೆ ಇದಕ್ಕೆ ಅವಕಾಶ ಮಾಡಿದ್ದು ಇದೆ. ಏಕೆಂದರೆ ಎಲ್ಲಾ ಸಂದರ್ಭದಲ್ಲಿ ಅಲ್ಲಿಗೆ ಯಾತ್ರಾರ್ಥಿಗಳು ಹೋದರೆ ನೀರು ಸಿಗುವುದಿಲ್ಲ. ಜಲಪಾತವೇ ಇರುವುದಿಲ್ಲ. ನಿರ್ದಿಷ್ಟ ತಿಂಗಳು, ನಿರ್ದಿಷ್ಟ ದಿವಸದಲ್ಲಿ ತಾತ್ಕಾಲಿಕವಾದ ಇದಕ್ಕೆ ವ್ಯವಸ್ಥೆಯನ್ನು ಮಾಡುತ್ತೀರಾ? ಮೂರನೆಯ ದಾಗಿ ಟೂರಿಸ್ಟ್ ವೀಕ್ ಮಾಡಿದಾಗ ಕೆಲವು ದಿವಸ ಸಾವಿರಾರು ಮಂದಿ ಬರುತ್ತಿದ್ದರು. ಈ ವ್ಯವಸ್ಥೆ ಯನ್ನು ತಾವು ಪುನಃ ಮುಂದೆ ಇಂತಿಷ್ಟು ವರ್ಷ, ಇಂತಿಷ್ಟು ದಿವಸ ಇಂತಹ ಸಂದರ್ಭದಲ್ಲಿ ನೀರು ಬಿಡುವ ವ್ಯವಸ್ಥೆ ಇದೆಯೆಂದು, ಇದನ್ನು ತಾತ್ಕಾಲಿಕವಾಗಿ ಮಾಡಿ ಜೋಗ ಜಲಪಾತದ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬರತಕ್ಕಂಥ ಒಂದು ಸಕ್ರೀಯವಾದ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳುತ್ತೀರಾ?

ಶ್ರೀ ಜೀವರಾಜ ಆಳ್ವ.—ನಿರ್ದಿಷ್ಟವಾದ ದಿವಸದಲ್ಲಿ ಆ ರೀತಿ ವ್ಯವಸ್ಥೆ ಮಾಡುವುದಕ್ಕೆ ಮಾನ್ಯ ಸದಸ್ಯರ ಸಲಹೆಯನ್ನು ಗಮನಕ್ಕೆ ತೆಗೆದುಕೊಂಡು ಆ ರೀತಿ ಮಾಡುತ್ತೇನೆ.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಂಭವಿಸಿದ ಅಪಘಾತಗಳು

(೪೯೫) ಶ್ರೀಮತಿ ಸುಮಾ ವಸಂತ, (ವೀರಾಜಪೇಟೆ) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೫–೮೬ ರಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಂಭವಿಸಿದ ಅಪಘಾತಗಳ ಸಂಖ್ಯೆ ಎಷ್ಟು.

ಆ) ಈ ಅಪಘಾತಗಳಿಂದ ಆದ ಪ್ರಾಣಿ ಹಾನಿ ಎಷ್ಟು

ಇ) ಇದರ ಬಗ್ಗೆ ಸರಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ರಾಚಯ್ಯ.—ಗೃಹ ಸಚಿವರು.

ಅ) ೬೯೮

ಆ) ೨೩೮

ಇ) ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧. ಬೆಂಗಳೂರು ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸೂಕ್ತ ಜಾಗಗಳಲ್ಲಿ ಪಾದಾಚಾರಿಗಳು ಹೋಗಲು ದಾರಿಗಳನ್ನು ವ್ಯವಸ್ಥೆ ಮಾಡಲಾಗಿದೆ.